ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.
ಸಂಖ್ಯೆ : ವಾಇ : ಉ ನಿ : ಸುಮಪ : 2018–19 ದಿನಾಂಕ: 15–07–2018

# ಪತ್ರಿಕಾ ಪ್ರಕಟಣೆ

## ಕರ್ನಾಟಕದಲ್ಲಿ ಡ್ರೋನ್ ಆಧಾರಿತ ಭೂಮಿ ಮತ್ತು ಆಸ್ತಿ ಸರ್ವೆ

**–ಸಚಿವ ಆರ್. ವಿ. ದೇಶಪಾಂಡೆ.**

ಬೆಂಗಳೂರು, ಜುಲೈ 15 (ಕರ್ನಾಟಕ ವಾರ್ತೆ)

ರಾಜ್ಯದ ಕಂದಾಯ ಇಲಾಖಾ ವತಿಯಿಂದ ಪ್ರಸ್ತುತ ಅನುಸರಿಸುತ್ತಿರುವ ಮಾನವ ಆಧಾರಿತ ಸಾಂಪ್ರದಾಯಿಕ ಸರ್ವೆ ಕಾರ್ಯದಲ್ಲಿ ಆಗುತ್ತಿದ್ದ ವಿಳಂಬ ಮತ್ತು ಗೊಂದಲವನ್ನು ನಿವಾರಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರದ ಸರ್ವೆ ಅಫ್ ಇಂಡಿಯಾ ಸಹಭಾಗಿತ್ವದಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ ಡ್ರೋನ್ ಆಧಾರಿತ ಭೂಮಿ ಮತ್ತು ಆಸ್ತಿ ಸರ್ವೆಯನ್ನು ಪ್ರಾಯೋಗಿಕವಾಗಿ ನಡೆಸಲು ತಿರ್ಮಾನಿಸಲಾಗಿದೆ ಎಂದು ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಆರ್.ವಿ.ದೇಶಪಾಂಡೆ ತಿಳಿಸಿದ್ದಾರೆ.

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಉಪಬಂಧಗಳಿಗೆ ಅನುಸಾರವಾಗಿ ಪ್ರತಿ 30 ವರ್ಷಗಳಿಗೊಮ್ಮೆ ಭೂಮಿಯ ಸರ್ವೆ ಕಾರ್ಯ ನಡೆಯಬೇಕು ಆದರೆ ಪ್ರಸ್ತುತ ಅನುಸರಿಸುತ್ತಿರುವ ವಿಧಾನಗಳಿಂದ ಬಹಳಷ್ಟು ವಿಳಂಬ ಮತ್ತು ಗೊಂದಲವಾಗುತ್ತಿತ್ತು ಮತ್ತು ಮಾನವ ಆಧಾರಿತ ಸರ್ವೆ ಕಾರ್ಯದಿಂದ ಭೂಮಾಪಕರ ವಿವೇಚನೆಯಂತೆ ಸರ್ವೆ ಕಾರ್ಯ ನಡೆಯುತ್ತಿತ್ತು. ಅಲ್ಲದೆ ಸ್ಪಷ್ಟತೆ ಹಾಗೂ ನಿಖರತೆಯಲ್ಲಿ ಸಹ ಗೊಂದಲವಿತ್ತು. ಈ ಗೊಂದಲವನ್ನು ನಿವಾರಿಸುವ ನಿಟ್ಟಿನಲ್ಲಿ ಈ ಡ್ರೋನ್ ಆಧಾರಿತ ಸರ್ವೆ ನಡೆಸಲು ಉದ್ದೇಶಿಸಲಾಗಿದೆ ಎಂದರು.

ಈಗಾಗಲೇ ಬೆಂಗಳೂರಿನ ಜಯನಗರದ ಸುಮಾರು 4000 ಆಸ್ಥಿಗಳ ಸರ್ವೆ ಕಾರ್ಯವನ್ನು ಈ ವಿಧಾನವನ್ನು ಅನುಸರಿಸಿ ಮಾಡಲಾಗಿದ್ದು ಪ್ರಸ್ತುತ ರಾಮನಗರ ಪಟ್ಟಣ ಮತ್ತು ಸುತ್ತಮುತ್ತಲಿನ ಕೃಷಿ ಪ್ರದೇಶಗಳ ಡ್ರೋನ್ ಆಧಾರಿತ ಸರ್ವೆ ಕಾರ್ಯಕ್ಕೆ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ 16–07–2018ರಂದು ಚಾಲನೆ ನೀಡಲಿದ್ದಾರೆಂದು ಕಂದಾಯ ಸಚಿವ ಆರ್.ವಿ.ದೇಶಪಾಂಡೆ ತಿಳಿಸಿದ್ದಾರೆ.

ಡ್ರೋನ್ ಆಧಾರಿತ ಸರ್ವೆಯಿಂದಾಗಿ 2 ತಿಂಗಳಲ್ಲಿ ಮಾಡಬಹುದಾದ ಕೆಲಸವನ್ನು ಕೇವಲ 2 ದಿನಗಳಲ್ಲಿ ಮಾಡಬಹುದಾಗಿದೆ ಮತ್ತು ಭೂಮಾಪಕರ ವಿವೇಚನೆಗೆ ಇಲ್ಲಿ ಅವಕಾಶವಿಲ್ಲದ್ದರಿಂದ ಮತ್ತು ಮಾನವ ಹಸ್ತಕ್ಷೇಪ ಇಲ್ಲದಿರುವುದರಿಂದ ಹೆಚ್ಚು ಸ್ಪಷ್ಟತೆ ಹಾಗೂ ನಿಖರತೆಯೂ ಇರುತ್ತದೆ. ಜೊತೆಗೆ ವೆಚ್ಚವು ಸಹ ಗಣನಿಯ ಪ್ರಮಾಣದಲ್ಲಿ ಇಳಿಕೆಯಾಗುತ್ತದೆ ಎಂದ ಅವರು ರಾಜ್ಯದಲ್ಲಿ ಸುಮಾರು 2.5 ಕೋಟಿ ಕೃಷಿ ಜಮೀನುಗಳು ಹಾಗೂ 50 ಲಕ್ಷ ನಗರ ಆಸ್ತಿಗಳಿದ್ದು, ಡ್ರೋನ್ ಆಧಾರಿತ ಪ್ರಾಯೋಗಿಕ ಸರ್ವೆ ಕಾರ್ಯದ ಯಶಸ್ಸನ್ನು ಆಧರಿಸಿ ರಾಜ್ಯಾದ್ಯಂತ ಈ ವಿಧಾನದ ಸರ್ವೆ ಕಾರ್ಯ ನಡೆಸುವ ಆಶಾ ಭಾವನೆ ಹೊಂದಿದ್ದು ಈ ಕಾರ್ಯ ಯಶಸ್ವಿಯಾದಲ್ಲಿ ರಾಜ್ಯದ ಸರ್ವೆ ಇತಿಹಾಸದಲ್ಲಿ ಇದೊಂದು ಮಹತ್ವದ ಮೈಲಿಗಲ್ಲಾಗಲಿದೆ ಎಂದು ಆರ್.ವಿ.ದೇಶಪಾಂಡೆ ಈ ಸಂದರ್ಭದಲ್ಲಿ ವಿವರಿಸಿದರು.

**DRONE BASED LAND AND PROPERTY SURVEY IN KARNATAKA A NEW FRONTIER -REVENUE MINISTER R.V.DESHPANDE**

Bengaluru, July 15 (Karnataka Information):

"The Govt. of Karnataka Revenue Department dreamt of vision to use technology to give farmers and citizens of Karnataka the perfect land records in a time bound manner. In this background, Govt. of Karnataka has taken up drone based land and property survey on pilot bases in association with survey of India" - R.V.Deshpande, Minister of Revenue and Skill development told today.

Speaking to the media, he told 'as per the provisions of the Karnataka Land Revenue Act 1964, land survey is to be conducted once in every 30 years. But due to traditional manual survey method it takes decades to complete this task and it is mammoth and slow exercise. In manual survey, there are chances of human bias and errors and one cannot expect accuracy. In this background Govt. has decided to take up drone based survey on pilot basis'.

Explaining the benefit of the drone based survey, he described 'this survey is objective, more accurate and up-to-date map of each property will get generated 1/10$^{th}$ of the time and this costs less than the traditional survey.

Revenue Department survey team along with drone team of Survey of India have started drone based property survey of about 4000 properties at Jayanagar in Bangalore.

Hon'ble Chief Minister of Karnataka is launching this pilot in Ramanagar city and adjoining rural agricultural areas on 16$^{th}$ July 2018.

The present pilot is to establish the accuracy of the drone based survey and build functional model as a proof of concept which in-turn can be scaled-up across state of Karnataka

Hence, as a proud pioneer in the use of technology for its citizens, Karnataka looks forward to complete the survey of 2.5

crore agricultural plots and 50 lakh urban property in about two years time, he added.

## ಹಿರಿಯ ಸಾಹಿತಿ ಎಮ್.ಎನ್.ವ್ಯಾಸರಾವ್ ವಿಧಿವಶ
## ಸಂತಾಪ ಸೂಚಕ ಸಂದೇಶ

ಬೆಂಗಳೂರು, ಜುಲೈ 15 (ಕರ್ನಾಟಕ ವಾರ್ತೆ)

ಸಾರಸ್ವತ ಲೋಕದ ಹಿರಿಯ ಸಾಹಿತಿ, ಗೀತರಚನೆಕಾರ ಎಮ್.ಎನ್.ವ್ಯಾಸರಾವ್ ಅವರು ತಮ್ಮ ೭೩ನೆಯ ವಯಸ್ಸಿನಲ್ಲಿ ಇಂದು ಬೆಳಗ್ಗೆ ಹೃದಯಾಘಾತದಿಂದ ವಿಧಿವಶರಾದರು.

ಕನ್ನಡ ಮತ್ತು ಸಂಸ್ಕೃತಿ ಸಚಿವೆ ಡಾ ಜಯಮಾಲಾ ಅವರು ತಮ್ಮ ಶೋಕ ಸಂದೇಶದಲ್ಲಿ ಎಮ್.ಎನ್.ವ್ಯಾಸರಾವ್ ಅವರು ಸ್ವತಃ ಅಪಾರ ಸಾಹಿತ್ಯಾಭಿಮಾನಿಗಳು, ತಮ್ಮ ಪತ್ನಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ. ಭಗವಂತನು ಮೃತರ ಆತ್ಮಕ್ಕೆ ಶಾಂತಿ ನೀಡಲಿ ಮತ್ತು ಅವರ ಕುಟುಂಬ ವರ್ಗದವರಿಗೆ ಈ ನೋವನ್ನು ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ಎಮ್.ಎನ್.ವ್ಯಾಸರಾವ್ ಅವರ ಕೃತಿಗಳು ತೆಲುಗು, ಹಿಂದಿ, ಇಂಗ್ಲಿಷ್ ಭಾಷೆಗಳಿಗೆ ಭಾಷಾಂತರಗೊಂಡಿವೆ. ಚೀನಿ, ಐರಿಷ್ ಸೇರಿದಂತೆ ಹಲವು ಭಾಷೆಗಳ ಕೃತಿಗಳನ್ನು ಇವರು ಕನ್ನಡಕ್ಕೆ ಅನುವಾದಿಸಿದ್ದಾರೆ.

ಹಲವು ಧಾರಾವಾಹಿ ಸಂಭಾಷಣಾಕಾರರಾಗಿ ಸಹ ಪ್ರಸಿದ್ದರು. ಎಮ್.ಎನ್.ವ್ಯಾಸರಾವ್ ಅವರ ರಚನೆಯ ಚಲನಚಿತ್ರ ಗೀತೆಗಳು ಸಾರ್ವಕಾಲಿಕ. ಶುಭಮಂಗಳ ಚಿತ್ರದ ಸೂರ್ಯಂಗೂ ಚಂದ್ರುಂಗೂ ಬಂದಾರೆ ಮುನಿಸು ಮತ್ತು ನಾಕೊಂದ್ಲ ನಾಕು ನಾಕೆರಡ್ಲ ಎಂಟು, ನೀನಿಲ್ಲದೆ ನನಗೇನಿದೆ, ತರಹದ ಹಲವು ಗೀತೆಗಳು ಇಂದಿಗೂ ಜನಪ್ರಿಯ ಎಂದು ಸಚಿವರು ಸಂತಾಪ ಸೂಚಕ ಸಂದೇಶದಲ್ಲಿ ತಿಳಿಸಿದ್ದಾರೆ

# ಶೋಕ ಸಂದೇಶ

ಬೆಂಗಳೂರು, ಜುಲೈ 15 (ಕರ್ನಾಟಕ ವಾರ್ತೆ)

ಹಿರಿಯ ಚಿತ್ರಸಾಹಿತಿ ಎಂ.ಎನ್.ವ್ಯಾಸರಾವ್ (73) ಅವರ ನಿಧನಕ್ಕೆ ಉನ್ನತ ಶಿಕ್ಷಣ ಸಚಿವ ಜಿ.ಟಿ.ದೇವೆಗೌಡ ಅವರು ತೀವ್ರ ಸಂತಾಪ ಸೂಚಿಸಿದ್ದಾರೆ.

ಎಂ.ಎನ್.ವ್ಯಾಸರಾವ್ ಅವರು ಬ್ಯಾಂಕಿಂಗ್ ವೃತ್ತಿಯಲ್ಲಿದ್ದರೂ ಚಿತ್ರ ಸಾಹಿತಿಯಾಗಿ ತುಂಬ ಪ್ರಸಿದ್ಧರಾಗಿದ್ದರು. ಎಂ.ಎನ್.ವ್ಯಾಸರಾವ್ ಅವರು ಪುಟ್ಟಣ್ಣ ಕಣಗಾಲ್ ಅವರ ಎಲ್ಲ ಚಿತ್ರಗಳಿಗೆ ಗೀತೆಗಳನ್ನು ರಚಿಸಿದ್ದರು.

ಅವರು ರಚಿಸಿದ ಭಾವಗೀತೆಗಳು ಜನಮಾನಸದಲ್ಲಿ ಇಂದು ಹಸಿರಾಗಿವೆ. ಅವರ ಆತ್ಮಕ್ಕೆ ಭಗವಂತ ಶಾಂತಿ ನೀಡಲಿ. ಹಾಗೂ ಅವರ ಸಾವಿನ ನೋವನ್ನು ಭರಿಸುವ ಶಕ್ತಿ ಅವರ ಕುಟುಂಬಕ್ಕೆ ನೀಡಲಿ ಅಂತ ನಾನು ತಾಯಿ ಚಾಮುಂಡೇಶ್ವರಿಯಲ್ಲಿ ಬೇಡಿಕೊಳ್ಳುತ್ತೇನೆ ಎಂದು ಶೋಕಸಂದೇಶದಲ್ಲಿ ತಿಳಿಸಿದ್ದಾರೆ.

ಬೆಂಗಳೂರು, ಜುಲೈ 15 (ಕರ್ನಾಟಕ ವಾರ್ತೆ)